# ಚಿನ್ನದ ತಾರೆ... ಓರೆಕೋರೆ

ಆಗಿನ್ನೂ ಬಿಟಿಎಸ್ ಕಾಲ; ಬಿಎಂಟಿಸಿ ಆಗಿರಲಿಲ್ಲ. 'ವೈಟ್ ಅಂಡ್ ವೈಟ್' ದಿರಿಸಿನಲ್ಲಿ ಹುಡುಗ ಬಸ್ ಹತ್ತಿ ನಿಂತಾಗಲೇ ಅಭಿನಯ ಪ್ರಾರಂಭವಾಗುತ್ತಿತ್ತು. ಕೆಲವು ಕಂಡಕ್ಟರ್‌ಗಳೂ ಆ ಕಲಾವಿದನ ಮಿಮಿಕ್ರಿ ಶೈಲಿ ಕಂಡು ಬೆರಗಾಗಿದ್ದರು. ಗಣೇಶನ ಹಬ್ಬ ಬಂತೆಂದರೆ ದಾಳಿ ಇಡುತ್ತಿದ್ದ ಆರ್ಕೆಸ್ಟ್ರಾಗಳ ವೇದಿಕೆ ಮೇಲೂ ಇದೇ ಅಭ್ಯಾಗತ ಕಲಾವಿದನ ಮನರಂಜನೆ. ಈ ಕಲಾವಿದನ ವೇದಿಕೆ ಪ್ರೇಮ ಅವರ ತಂದೆಗೆ ಮಾತ್ರ ಇಷ್ಟವಾಗುತ್ತಿರಲಿಲ್ಲ. ವೇದಿಕೆ ಇಳಿಯುವುದನ್ನೇ ಕಾಯ್ದು, ಆಮೇಲೆ ತಪರಾಕಿ ಕೊಡುತ್ತಿದ್ದರು. ಮಗ ಓದಿನ ಕಡೆ ಗಮನ ಕೊಡುತ್ತಿಲ್ಲವಲ್ಲ ಎಂಬುದು ಅವರ ಕೊರಗು. ಅಪ್ಪ ವಾಚಾಮಗೋಚರವಾಗಿ ಬಯ್ದ ಮೇಲೆ ಹುಡುಗ ಬೇಸರದಿಂದ ಸ್ಮಶಾನದ ಕಡೆಗೆ ಹೋಗುತ್ತಿದ್ದ. ಅಲ್ಲಿ ಬದುಕಿನ ಧ್ಯಾನ ಮಾಡಿ ಮರಳಿದರೆ ರಿಲೀಫು.

ಇಂತಿಪ್ಪ ಹುಡುಗ ನಟನೆ ಕಲಿಸುವ ಶಾಲೆ ಸೇರಿ, ನಾಟಕದ ಗೀಳು ಹತ್ತಿಸಿಕೊಂಡು, ಕಿರುತೆರೆಗೂ ಲಗ್ಗೆಇಟ್ಟು, ಅಲ್ಲಿ ಕಚಗುಳಿ ಇಟ್ಟು ಜನಪ್ರಿಯನಾದ. ಆಮೇಲೆ ಹಿರಿತೆರೆಗೂ ಪ್ರವೇಶ ಸಿಕ್ಕಿತೆನ್ನಿ. ಮೂದಲಿಕೆ, ಕುಳ್ಳಗಿದ್ದ ಕಾರಣಕ್ಕೆ ಎದುರಾಗುತ್ತಿದ್ದ ಟೀಕೆ ಎಲ್ಲವನ್ನೂ ನುಂಗಿಕೊಂಡೇ ಇದ್ದ ಹುಡುಗ ದಿಢೀರನೆ ನಾಯಕನಾದ. ಮೊದಲ ಚಿತ್ರ ಸುಮಾರು. ಆಮೇಲೆ ಮಳೆ ಸುರಿದದ್ದೇ ಹುಡುಗನ ಕಲಾಬಣ್ಣ ಬಯಲಾಯಿತು. ಜನ ಮೆಚ್ಚಿಕೊಂಡರು. 'ಚಿನ್ನದ ತಾರೆ' ಎಂಬ ಬಿರುದು ಹೆಸರಿಗೆ ಅಂಟಿಕೊಂಡಿತು.

ಯಾವ ಪ್ರದೇಶದಲ್ಲಿ ನಡೆಯುತ್ತಿದ್ದ ಆರ್ಕೆಸ್ಟ್ರಾಗಳ ವೇದಿಕೆ ಮೇಲೆ ಹುಡುಗ ಮನರಂಜನೆ ನೀಡುತ್ತಿದ್ದನೋ, ಅದೇ ಸ್ಥಳದ ಸಮೀಪವಿದ್ದ ರೆಸಾರ್ಟ್‌ನಲ್ಲಿ ಆತನ ಆರತಕ್ಷತೆ ನಡೆಯಿತು. ಅಭಿಮಾನಿಗಳು, ಟೀವಿ ವಾಹಿನಿಯವರು ಲಗ್ಗೆ ಇಟ್ಟರು. ಹತ್ತಿರವಿದ್ದ ಅನೇಕರು ನೊಂದುಕೊಂಡರು. ನಟನೆ ಕಲಿಯುವ ಆಸೆಯಿಂದ ಹುಡುಗ ಬಸ್ ಹತ್ತಿದಾಗ ಜೇಬಿಗೆ ಒಂದಿಷ್ಟು ರೂಪಾಯಿ ಇಟ್ಟು ಕಳುಹಿಸಿದ ಸ್ನೇಹಿತ ಆರತಕ್ಷತೆಗೆ ತನ್ನನ್ನು ಕರೆಯಲಿಲ್ಲವಲ್ಲ ಎಂದು ಬೇಸರಪಟ್ಟ.

'ಚಿನ್ನದ ತಾರೆ' ಬೆರಳೆಣಿಕೆಯ ಚಿತ್ರಗಳಲ್ಲಿ ಹೊಳೆದದ್ದೇ ಸಂಭಾವನೆ ಗಗನಕ್ಕೇರಿತು. ಯಶಸ್ಸಿನ ಗ್ರಾಫು ಸ್ವಲ್ಪ ಇಳಿಯತೊಡಗಿದ್ದೇ ತಮ್ಮನ್ನು ಬೆಳೆಸಿದ ಮಳೆಯ ಕಡೆಗೆ ಮತ್ತೆ ಮುಖಮಾಡಿದರು. ಈ ಸಲ ಬೆಳೆ ಹಸಿರಾಗಿರಲಿಲ್ಲ. ನಿರ್ಮಾಣ ಸಂಸ್ಥೆಯನ್ನೂ ಹುಟ್ಟುಹಾಕಿ, ಪತ್ನಿಯನ್ನೂ ಉದ್ಯಮಕ್ಕಿಳಿಸಿದರು. ಚೊಚ್ಚಿಲ ನಿರ್ಮಾಣದ ಚಿತ್ರದ ನಿರ್ದೇಶಕ ಸರಿಬರಲಿಲ್ಲ ಎಂದು ಚಿತ್ರೀಕರಣ ಶುರುವಾದ ಕೆಲವು ದಿನಗಳ ನಂತರ ಅವರಿಗೆ ಗೇಟ್‌ಪಾಸ್ ಕೊಟ್ಟರು. ಆ ಕುರ್ಚಿಯ ಮೇಲೆ ತಾವೇ ಕೂತರು. ಜಗಜ್ಜಾಣ ಛಾಯಾಗ್ರಾಹಕ ಜೊತೆಗಿದ್ದಿದ್ದರಿಂದ ಸಿನಿಮಾ ತೆಗೆಯುವುದು ಅವರಿಗೆ ಸಲೀಸಾಗಿತ್ತು. ಆ ಹುಂಬತನದಿಂದಲೋ ಏನೋ ಸಿನಿಮಾ ಓಡಲಿಲ್ಲ. ಆದರೂ ನಟ ಕೂಲ್ ಆಗಿಯೇ ಇದ್ದರು.

ಕಾಮಿಡಿಯಿಂದ ಸಸ್ಪೆನ್ಸ್ ಥ್ರಿಲ್ಲರ್‌ಗೆ, ಆ್ಯಕ್ಷನ್‌ಗೆ, ಮರಳಿ ರೊಮ್ಯಾಂಟಿಕ್ ಹಳಿಗೆ... ಹೀಗೆ ಪಥವನ್ನು ಪದೇಪದೇ ಬದಲಿಸಿದರೂ ಚಿನ್ನದ ಹೊಳಪು ಹೆಚ್ಚಾಗಲಿಲ್ಲ. ಮಕ್ಕಳು ಮೆಚ್ಚುತ್ತಿದ್ದ ಚಿನ್ನದ ತಾರೆ ಮಕ್ಕಳಿಂದಲೇ ತಿರಸ್ಕಾರಕ್ಕೆ ಒಳಗಾಯಿತು.

ಮಡದಿ, ಮಗು, ಸಿನಿಮಾ, ಹಣ, ಮನೆ, ವಹಿವಾಟು, ಸ್ಟಾರ್‌ಗಿರಿ ಎಲ್ಲವನ್ನೂ ಮುದ್ದಿಸುತ್ತಿರುವ ಅವರು ಹೆಸರಿನ ಹಿಂದಿನ ತಮ್ಮ ಚಿನ್ನ ಬೆಳಗಿಸುವುದು ಹೇಗೆ ಎಂಬ ಚಿಂತೆಯಲ್ಲಿ ಈಗ ಮುಳುಗಿದ್ದಾರೆ.

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68